**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು–560 001.**

**********************************************************************************

ಸಂಖ್ಯೆ: ಯೋ–6/ನೆರೆ–ಮಳೆಹಾನಿ/ಆರ್‌ಐಡಿಎಫ್–25/ಕೊ.ಮ.ನಿರ್ಮಾಣ–12/2019–20 ದಿನಾಂಕ:18.03.2020

**ಜ್ಞಾಪನ**

ವಿಷಯ:–2019–20ನೇ ಸಾಲಿನಲ್ಲಿ ನಬಾರ್ಡ್ ಸಹಯೋಗದ ಆರ್.ಐ.ಡಿ.ಎಫ್–25ರ ಯೋಜನೆಯಡಿ ಪ್ರವಾಹ ಪೀಡಿತ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕೊಠಡಿ ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ.

ಉಲ್ಲೇಖ: 1.ಸಹಾಯಕ ಪ್ರಧಾನ ವ್ಯವಸ್ಥಾಪಕರು, ನಬಾರ್ಡ್‌ರವರ ಪತ್ರ ಸಂಖ್ಯೆ:NB.KA.RO/SPD/3246/RIDF- 06/2019–20.Dated :30.01.2020

2.ಸರ್ಕಾರದ ಆದೇಶ ಸಂಖ್ಯೆ:ಇಪಿ.120.ಯೋಸಕ.2019 ದಿನಾಂಕ:18.02.2020.

3.ಈ ಕಛೇರಿ ಜ್ಞಾಪನ ಪತ್ರ ಸಮ ಸಂಖ್ಯೆ ದಿನಾಂಕ:11.03.2020.

**********

2019ನೇ ಸಾಲಿನಲ್ಲಿ ಪ್ರವಾಹ ಮತ್ತು ಅಧಿಕ ಮಳೆಹಾನಿಯಿಂದ ಶಿಥಿಲಗೊಂಡಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಕೊಠಡಿಗಳ ಮರು ನಿರ್ಮಾಣಕ್ಕಾಗಿ ನಬಾರ್ಡ್ ಸಹಯೋಗದ ಆರ್.ಐ.ಡಿ.ಎಫ್–25ರ ಯೋಜನೆಯಡಿ ಅನುಮೋದನೆಯನ್ನು ಉಲ್ಲೇಖ(1)ರಂತೆ ನೀಡಲಾಗಿದೆ. ಉಲ್ಲೇಖ–2ರ ಸರ್ಕಾರಿ ಆದೇಶದನ್ವಯ ಸದರಿ ಯೋಜನೆಯನ್ನು ಲೋಕೋಪಯೋಗಿ ಇಲಾಖೆ ಮೂಲಕ ಅನುಷ್ಠಾನಗೊಳಿಸಲು ಸೂಚಿಸಿ ಮಂಜೂರಾತಿ ನೀಡಲಾಗಿದೆ.

ಉಲ್ಲೇಖ(3)ರನ್ವಯ ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲು ಜಿಲ್ಲಾವಾರು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಈ ಆದೇಶಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ **(ಮಾಹಿತಿಗಾಗಿ www.schooleducation.kar.nic.in ಆಯವ್ಯಯ ಮತ್ತು ಯೋಜನೆ ಲಿಂಕ್ ಮೂಲಕ ವೀಕ್ಷಿಸಬಹುದಾಗಿದೆ)** ಮತ್ತು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಇ–ಮೇಲ್ ಮೂಲಕ ಸಾಫ್ಟ್ ಪ್ರತಿಯನ್ನು ಮತ್ತು ಹಾರ್ಡ್ ಪ್ರತಿಯನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರು ಕೂಡಲೇ ಆಯಾ ಜಿಲ್ಲಾ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರನ್ನು ಸಂಪರ್ಕಿಸಿ ಅವರ ಕಾರ್ಯವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಲ್ಲಿ ಮಂಜೂರಾಗಿರುವ ಶಾಲೆಗಳ ಕಾಮಗಾರಿಗಳನ್ನು ತಕ್ಷಣ ಪ್ರಾರಂಭಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

ಒಬ್ಬರಿಗಿಂತ ಹೆಚ್ಚು ಕಾರ್ಯನಿರ್ವಾಹಕ ಅಭಿಯಂತರರು ಇರುವ ಜಿಲ್ಲೆಗಳಲ್ಲಿ ಅವರ ಕಾರ್ಯವ್ಯಾಪ್ತಿಗೆ ಒಳಪಡುವ ತಾಲ್ಲೂಕು/ಗ್ರಾಮಗಳಲ್ಲಿ ಮಂಜೂರಾಗಿರುವ ಶಾಲೆಗಳ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರು ಆರ್.ಐ.ಡಿ.ಎಫ್–25ರ ಯೋಜನೆಯಡಿ ಮಂಜೂರಾಗಿರುವ ಕಾಮಗಾರಿಗಳನ್ನು ತಕ್ಷಣ ಪ್ರಾರಂಭಿಸಲು ಅನುಕೂಲವಾಗುವಂತೆ ನಿವೇಶನಗಳನ್ನು ಲೋಕೋಪಯೋಗಿ ಇಲಾಖೆಗೆ ದಿನಾಂಕ:26.03.2020ರೊಳಗೆ ಹಸ್ತಾಂತರಿಸುವುದು ಮತ್ತು ಈ ನಿಟ್ಟಿನಲ್ಲಿ ಕೈಗೊಂಡ ಕ್ರಮದ ಬಗ್ಗೆ ಪೂರ್ಣವಾದ ವರದಿಯನ್ನು ಈ ಕಛೇರಿಗೆ ದಿನಾಂಕ:30.03.2020ರಂದು ಮುದ್ದಾಂ ಸಲ್ಲಿಸುವುದು.

**ಸಹ ನಿರ್ದೇಶಕರು(ಶಾಲಾ ಶಿಕ್ಷಣ)**

ಗೆ,

ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ.